## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 67/2019

**ಸಾಕ್ಷಿಯನ್ನು ದಿಃ 31.05.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಗಣೇಶ್ | ಸಿಡಬ್ಲ್ಯೂಃ5 | ಪಿಡಬ್ಲ್ಯೂಃ5 |
| ತಂದೆಯ ಹೆಸರು | ಕಾಳೇಗೌಡ | | |
| ವಯಸ್ಸು | 42 ವರ್ಷ | | |
| ಕೆಲಸ | ಬಾರ್ ನಲ್ಲಿ ಕ್ಯಾಶೀಯರ್ | | |
| ವಾಸಸ್ಥಳ | ಎನ್.ಎಸ್. ತಿಟ್ಟು, ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ಶಿವ ವೈನ್ ಅಂಗಡಿಯಲ್ಲಿ ಸುಮಾರು 20 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಈಗಲೂ ಸಹ ನಾನು ಅಲ್ಲಿಯೆ ಕೆಲಸ ಮಾಡುತ್ತಿದ್ದೇನೆ. ಚಾಸಾ 1 ರವರು ನಮ್ಮ ವೈನ್ ಷಾಪ್ ನ ಮಾಲೀಕರಾಗಿರುತ್ತಾರೆ. ಚಾಸಾ 4 ರವರು ಚಾಸಾ 1 ರವರ ಹಿಂದಿನ ಮನೆಯವರಾಗಿರುತ್ತಾರೆ. ನನಗೆ ಚಾಸಾ 4 ರವರ ತಂದೆ ಕಲೀಂ ರವರು ನಿಮ್ಮ ವೈನ್ ಷಾಪ್ ನಲ್ಲಿ ಕಳ್ಳತನವಾಗಿದೆ ಎಂದು ಫೋನ್ ಮಾಡಿದ ಮೇರೆಗೆ ನಾನು ನಮ್ಮ ವೈನ್ ಷಾಪ್ ಗೆ ಬಂದು ನೋಡಿದಾಗ ನಮ್ಮ ವೈನ್ ಷಾಪ್ ನ ಡೋರ್ ಎಲ್ಲಾ ಹೊಡೆದು ಹಾಕಿದ್ದರು. ಒಳಗೆ ಬಂದು ನೋಡಿದಾಗ 15 ರಿಂದ 20 ಸಾವಿರ ರೂ. ಕಳ್ಳತನವಾಗಿದೆ ಎಂದು ತಿಳಿಯಿತು. ಅಷ್ಟರಲ್ಲಿ ಚಾಸಾ 1 ರವರು ಸಹ ಅಲ್ಲಿಗೆ ಬಂದರು. ಈ ಘಟನೆಯು ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ಆಗಿರುತ್ತದೆ. ಈ ಕಳ್ಳತನವು ಯಾವ ದಿನಾಂಕದಂದು ಆಗಿದೆ ಎಂದು ತಿಳಿದಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಈ ಮೇಲಿನಂತೆ ಹೇಳಿಕೆ ನೀಡಿರುತ್ತೇನೆ.

( ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ–**

ದಿಃ 30.05.2018 ರಂದು ನಾನು ಕೆಲಸ ಮುಗಿದು ನಮ್ಮ ವೈನ್ ಷಾಪ್ ಗೆ ಬೀಗ ಹಾಕಿಕೊಂಡು ಮನೆಗೆ ಹೋದಾಗ ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ನಮ್ಮ ವೈನ್ ಷಾಪ್ ನ ಮಾಲೀಕರು ನಮ್ಮ ಮನೆ ಹತ್ತಿರ ಬಂದು ನಮ್ಮ ವೈನ್ ಷಾಪ್ ಬಳಿ ಕಳ್ಳತನವಾಗಿದೆ ನೋಡಿಕೊಂಡು ಬರೋಣ ಬಾ ಎಂದು ಹೇಳಿದರು ಎಂದರೆ ಸರಿ. ನಾವು ಅಲ್ಲಿಗೆ ಹೋದಾಗ ಚಾಸಾ 4 ರವರು ಸ್ಥಳದಲ್ಲಿ ಇದ್ದು ಮಧ್ಯರಾತ್ರಿ 1 ರಿಂದ 1.15 ಗಂಟೆ ಸಮಯದಲ್ಲಿ ನಿಮ್ಮ ಅಂಗಡಿಯ ಬಳಿ ಏನೋ ಶಬ್ದ ಬಂತು ನಾನು ಆಗ ಕೂಗಿಕೊಂಡಾಗ 2 ವ್ಯಕ್ತಿಗಳು ಓಡಿ ಹೋದರು ಎಂದು ತಿಳಿಸಿದರು ಎಂದರೆ ಸರಿ. ಈ ವಿಚಾರವನ್ನು ನಾನು ಚಾಸಾ 1 ರವರಿಗೆ ಫೋನ್ ಮಾಡಿ ತಿಳಿಸಿದೆ ಎಂದರೆ ಸರಿ. ನಂತರ ನಾವು ಅಂಗಡಿಯನ್ನು ನೋಡಲಾಗಿ ಅಂಗಡಿಯ ಮರದ ಬಾಗಿಲ ಒಳ ಹೊಕ್ಕಿ ನೋಡಿದಾಗ 500 ರಿಂದ 800 ರೂ. ಕಳ್ಳತನವಾಗಿದೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ಈ ರೀತಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯನ್ನು ನಿಪಿ. 6 ಎಂದು ಗುರುತಿಸಲಾಯಿತು.

**ಪಾಟೀಸವಾಲು ಃ 1 ನೇ ಆರೋಪಿ ಪರ ತ್ರಿ ಎಂ.ಈ.ಎಂ. ವಕೀಲರಿಂದ**

ಪೊಲೀಸರ ಮುಂದೆ ಮೇಲ್ಕಂಡಂತೆ ಹೇಳಿಕೆಯನ್ನು ಯಾವ ದಿನ, ತಿಂಗಳು ಮತ್ತು ಇಸವಿಯಲ್ಲಿ ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನ ಹೇಳಿಕೆ ಕೊಡುವ ಪೂರ್ವದಲ್ಲಿ ಪೊಲೀಸರು ನನಗೆ ನೊಟೀಸು ಕೊಟ್ಟಿರಲಿಲ್ಲ. ಚಾಸಾ 1 ರವರು ಮಧ್ಯರಾತ್ರಿಯಲ್ಲಿ ನನಗೆ ಫೋನ್ ಮಾಡಿದ್ದರಾ ಅಥವಾ ಅವರೆ ನಮ್ಮ

ಮನೆ ಬಳಿ ಬಂದಿದ್ದರಾ ಎಂದರೆ ಫೋನ್ ಮಾಡಿದ್ದರು ಎನ್ನುತ್ತಾರೆ. ಚಾಸಾ 1 ರವರು ನಮ್ಮ ಮನೆ ಬಳಿ ಬಂದಿದ್ದರು ಎಂದು ನಾನು ಹೇಳಿಕೆಯಲ್ಲಿ ತಿಳಿಸಿಲ್ಲ. ಚಾಸಾ 1 ರವರು ನಮ್ಮ ಮನೆ ಬಳಿ ಬಂದಿದ್ದರು ಎಂದು ಹೇಳಿಕೆಯಲ್ಲಿ ಇದ್ದರೆ ಅದು ಸುಳ್ಳಾ ಎಂದರೆ ಅದು ನನಗೆ ಗೊತ್ತಿಲ್ಲ. ಚಾಸಾ 1 ರವರ ಅಂಗಡಿಯಲ್ಲಿ 15 ರಿಂದ 20 ಸಾವಿರ ರೂ. ಹಣ ಕಳ್ಳತನವಾಗಿತ್ತು ಎಂದು ನಾನು ಯಾವ ಆಧಾರದ ಮೇಲೆ ಹೇಳಿದ್ದೇನೆ ಎಂದರೆ 10, 20 ಇತ್ಯಾದಿ ಹಣ ಸುಮಾರು ಒಂದೆರಡು ಸಾವಿರ ಹಣ ಇತ್ತು ಅದು ಕಳ್ಳತನವಾಗಿದೆ ಎಂದು ಹೇಳಿದ್ದೇನೆ ಹೊರತು 15 ರಿಂದ 20 ಸಾವಿರ ರೂ. ಕಳ್ಳತನವಾಗಿದೆ ಎಂದು ನಾನು ಹೇಳಿರಲಿಲ್ಲ. ಬಾರಿನ ಕ್ಯಾಶೀಯರ್ ನಾನೆ ಆಗಿರುವುದರಿಂದ  ಎಷ್ಟು ಹಣ ಇತ್ತು ಎಂದು ನನಗೆ ನಿಖರವಾಗಿ ಗೊತ್ತಿರುತ್ತದೆ, ನಾನು ಹಣವನ್ನು ಅದಾಗಲೆ ಚಾಸಾ 1 ರವರಿಗೆ ಹಸ್ತಾಂತರಿ ಆಗಿತ್ತು. ಅಂದು ಬಾರಿನಲ್ಲಿ ಯಾವುದೆ ಹಣ ಇರಲಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದ  ಯಾವುದೆ ವಿಚಾರ ಗೊತ್ತಿಲ್ಲ, ಆದಾಗ್ಯೂ  ನನ್ನ ಮಾಲೀಕರಾದ  ಚಾಸಾ 1 ರವರ ಕೋರಿಕೆಯ ಮೇರೆಗೆ  ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಹೇಳಿಕೆ ಕೊಟ್ಟಿಲ್ಲ, ಚಾಸಾ 1 ರವರ  ಚಿತಾವಣೆ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 6 ರ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಈ ಮೇಲ್ಕಂಡ ಪಾಟೀ ಸವಾಲನ್ನು  2  ನೇ ಆರೋಪಿ ಪರ ವಕೀಲರು ಅನುಮೋದಿಸಿ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.